**ಓ ಎಸ್ ನಂಃ367/2019**

**ಪಿ. ಡಬ್ಲ್ಯೂ ಃ 1**

**ದಿಃ 16.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಸಿ ಎಂ ವಕೀಲರಿಂದ ಃ**

ಪ್ರತಿವಾದಿಗಳು ಮತ್ತು ಅವರ ಅಣ್ಣ ತಮ್ಮಂದಿರು ಮಾಡಿಕೊಂಡ ಪಾರಿಕತ್ ನೋಂದಾಯಿತ ಪಾರಿಕತ್ ಇರುತ್ತದೆ. ನಾನು ಪ್ರತಿವಾದಿಗಳು ಮಾಡಿಕೊಂಡಿದ್ದ ವಿಭಾಗಪತ್ರದ ದೃಢೀಕೃತ ಪ್ರತಿಯನ್ನು ಪಡೆದು ನೋಡಿದ್ದೇನೆ. ಅದನ್ನು ಕ್ರಯದ ಕರಾರುಪತ್ರ ನೋಂದಣಿಯಾದ ನಂತರ ನೋಡಿದ್ದೇನೆ. ಕರಾರುಪತ್ರ ಆಗುವ ಮೊದಲು ನೋಂದಾಯಿತ ವಿಭಾಗಪತ್ರ ನೋಡಬೇಕಿತ್ತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನೋಂದಾಯಿತ ಕ್ರಯದ ಕರಾರುಪತ್ರ ನನ್ನ ಬಳಿಯೇ ಇತ್ತು. ಕ್ರಯದ ಕರಾರುಪತ್ರದ ಹಿಂಭಾಗದಲ್ಲಿ ಷರಾ ಬರೆಸಿಲ್ಲ. ಪ್ರತ್ಯೇಕ ಛಾಪಾ ಕಾಗದದ ಮೇಲೆ ಷರಾ ಬರೆಯಿಸಿದ್ದೇವೆ. ಮೂಲ ಕ್ರಯದ ಕರಾರುಪತ್ರದಲ್ಲಿ ಸ್ಥಳಾವಕಾಶ ಇರಲಿಲ್ಲ.

ಪ್ರತಿವಾದಿ ನಾಗರಾಜು ಇವರ ಹೆಂಡತಿ ಹೆಸರು ಲಕ್ಷ್ಮೀದೇವಿ ಇರುತ್ತದೆ. ಅವರನ್ನು ನಾನು ನೋಡಿದ್ದೇನೆ. ನನ್ನ ಮತ್ತು ಅವರ ಮದ್ಯೆ ಹಣಕಾಸಿನ ವ್ಯವಹಾರ ಇರುವುದಿಲ್ಲ. ಲಕ್ಷ್ಮೀದೇವಿ ಎಂಬುವವರ ಹೆಸರಿನಲ್ಲಿ ಸಿ ಎಸ್ ಗ್ರ್ಯಾನೆಟ್ ಎಂಬ ಸಂಸ್ಥೆ ಇದೆ ಎಂದರೆ ಸರಿ. ದಿನಾಂಕ ಃ 06.1.2015 ರಂದು ಅವರು ರೂ 50 ಸಾವಿರಗಳನ್ನು ನನಗೆ ಚೆಕ್ ಮೂಲಕ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿನಾಂಕ ಃ
26.06.2015 ರಂದು ಚೆಕ್ ಮೂಲಕ ರೂ. 30 ಸಾವಿರಗಳು ನನ್ನ ಖಾತೆಗೆ ಬಂದಿದೆ ಎಂದರೆ ಸರಿಯಲ್ಲ. ಆ ಎರಡು ಚೆಕ್ ಗಳನ್ನು ನಾನು ಪ್ರತಿವಾದಿಗಳಿಗೆ ಕೊಟ್ಟ ಸಾಲದ ಬಡ್ಡಿಗಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನೇ ಆ ಎರಡು ಚೆಕ್ ಗಳನ್ನು ತೆಗೆದುಕೊಂಡು ಹೋಗಿ ನಗದೀಕರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಟಿ ಎಸ್ ವೆಂಕಟೇಶ್ ನಮ್ಮ ಚಿಕ್ಕಪ್ಪನ ಅಳಿಯ ಇರುತ್ತಾರೆ. ಅವರು ಕರಾರುಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ.

ದಿನಾಂಕ ಃ 7.03.2015 ರಂದು ಟಿ ಎಸ್ ವೆಂಕಟೇಶ್ ಇವರ ಮೂಲಕ ನಾನು ಲಕ್ಷ್ಮೀದೇವಿ

ಇವರಿಂದ ರೂ. 30 ಸಾವಿರಗಗಳನ್ನು ಬಡ್ಡಿ ರೂಪದಲ್ಲಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಚೆಕ್ ಮೂಖಾಂತರ ಹಣ ಪಡೆಯಬಾರದು ಎಂಬ ಉದ್ದೇಶದಿಂದ ಬಡ್ಡಿ ಹಣವನ್ನು ನಗದಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಮಾಗಡಿ ನ್ಯಾಯಾಲಯದಲ್ಲಿ ನಾನು ಮಾಡಿದ 3 ಕೇಸ್ ಗಳಿವೆ. ಅದರಲ್ಲಿ ಎರಡು ಮುಗಿದಿವೆ ಎಂದು ಸಾಕ್ಷಿ ಹೇಳುತ್ತಾರೆ. ಒಂದು ಚೆಕ್ ಅಮಾನ್ಯ ಪ್ರಕರಣ ಮುಗಿದಿದೆ ಮತ್ತು ಇನ್ನೊಂದು ಕರಾರುಪತ್ರ ಬರೆಯಿಸಿಕೊಂಡ ಪ್ರಕರಣ ಜಯಣ್ಣ ಇವರ ಮೇಲೆ ಮಾಡಿದ್ದು ಮುಗಿದಿದೆ. ಜಯಣ್ಣ ಎಂದರೆ 1ನೆ ಪ್ರತಿವಾದಿಯ ತಮ್ಮ ಎಂದರೆ ಸರಿ. ಅವರು ಬರೆದುಕೊಟ್ಟ ಸ್ವತ್ತು ವಾಸದ ಮನೆ ಇತ್ತು, ಅದರಲ್ಲಿ ಈಗ ಜಯಣ್ಣ ವಾಸವಾಗಿದ್ದಾರೆ. ಅದನ್ನು ಕ್ರಯಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ನಾನು ಕರಾರುಪತ್ರ ಮಾಡಿಸಿಕೊಂಡಿದ್ದೇನು. ಅದನ್ನು ನಾನು ಹಣ ವಾಪಸ್ ಪಡೆದು ರಾಜಿ ಮಾಡಿಕೊಂಡಿದ್ದೇನೆ. ನಮ್ಮದು ತಾವರೇಕೆರೆ 160 ವರ್ಷ ಹಳೆಯ ಮನೆಯಾಗಿದ್ದರಿಂದ ಪೆದ್ದನಪಾಳ್ಯದಲ್ಲಿ ಮನೆ ತೆಗೆದುಕೊಳ್ಳಬೇಕೆಂದಿದ್ದೇನು. ನಾನು ಅಂಗಡಿ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದು ತಾವರೇಕೆರೆ ಗ್ರಾಮದಲ್ಲಿ ಎಂದರೆ ಸರಿ.

ಜಯಣ್ಣನ ಜೊತೆ ಮಾಡಿಕೊಂಡ ಕರಾರುಪತ್ರವು ಸಹ ಆತನಿಗೆ ಕೊಟ್ಟ ಸಾಲದ ಭದ್ರತೆಗಾಗಿ ಬರೆಯಿಸಿಕೊಂಡ ಪತ್ರವಾಗಿತ್ತು ಎಂದರೆ ಸರಿಯಲ್ಲ. ಅವರು ಮನೆ ಕೊಡುವುದಿಲ್ಲವೆಂದು ವಾದ ಮಾಡಿದ್ದರಿಂದ ಅವರಿಂದ ಹಣ ಪಡೆದು ಕೇಸ್ ಮುಗಿಸಿದ್ದೇವೆ. ಆ ವ್ಯವಹಾರವನ್ನು ರೂ. 30 ಲಕ್ಷಗಳಿಗೆ ಮಾಡಿಕೊಂಡಿದ್ದೇವು. ರಾಜಿ ಆದ ನಂತರ ರೂ. 45 ಲಕ್ಷಗಳನ್ನು ನನಗೆ ಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಪ್ರಕರಣದಲ್ಲಿ ಇರುವ ಸ್ವತ್ತಿನ ವಿಸ್ತೀರ್ಣ 2 ಮುಕ್ಕಾಲು ಗುಂಟೆ ಇತ್ತು. 2015 ರಲ್ಲಿ ಅದನ್ನು ಕರಾರುಪತ್ರ ಮಾಡಿಕೊಂಡಿದ್ದೇನು. ಈಗ 3 ತಿಂಗಳ ಕೆಳಗೆ ರಾಜಿ ಮಾಡಿಕೊಂಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಬಡ್ಡಿಗಾಗಿ ಅವರಿಂದ ರೂ. 15 ಲಕ್ಷಗಳನ್ನು ಹೆಚ್ಚುವರಿಯಾಗಿ ವಸೂಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರ ಓ ಎಸ್ ನಂಬರ್ 366/2019 ಇತ್ತು.

ಚೆಕ್ ಅಮಾನ್ಯಗೊಂಡ ಪ್ರಕರಣವನ್ನು ಶೇಖರ್ ರಾಜಪ್ಪ ಎಂಬುವವರು ಮೇಲೆ ಮಾಡಿದ್ದೇನು. ಅದರ ನಂಬರ್ ನೆನಪಿಲ್ಲ. ಅದನ್ನು ಲಾರಿ ಬಾಡಿಗೆ ಹಣ ಕೊಡದೆ ಇದ್ದುದ್ದಕ್ಕೆ ಮತ್ತು ಚೆಕ್ ಕೊಟ್ಟಿದ್ದಕ್ಕೆ ಹಾಕಿದ್ದೇನು. ಅದರಲ್ಲಿ ಮೊತ್ತ ರೂ. 1 ಲಕ್ಷ ಇತ್ತು. ಅದನ್ನು ರೂ. 80 ಸಾವಿರಗಳಿಗೆ ರಾಜಿ ಮಾಡಿಕೊಂಡಿದ್ದೇನೆ. ಸದರಿ ವ್ಯವಹಾರವನ್ನು ಸಹ ನಾನು ಬಡ್ಡಿ ಹಣಕ್ಕಾಗಿ ಹಣ ಕೊಟ್ಟು ಮಾಡಿದ್ದೇನೆ ಎಂದರೆ ಸರಿಯಲ್ಲ. 1ನೆ ಪ್ರತಿವಾದಿಯು ನನಗೆ ಹುಷಾರಿಲ್ಲ, ಕ್ರಯಪತ್ರ

ಬರೆದುಕೊಡಲು ಇನ್ನು ಸಮಯ ಬೇಕೆಂದು ಷರಾ ಬರೆದುಕೊಟ್ಟಿದ್ದಾರೆ. ಷರಾ ಬರೆಯಿಸಿಕೊಳ್ಳುವ ಮೊದಲು ಪ್ರತಿವಾದಿಗಳಿಗೆ ನಾನು ಯಾವುದೆ ಲೀಗಲ್ ನೋಟೀಸ್ ಕೊಟ್ಟಿಲ್ಲ. ಷರಾದಲ್ಲಿ ನಾಗರಾಜು ಹಣ ಪಡೆದುಕೊಂಡಿಲ್ಲ. ಅದರಲ್ಲಿ 2018 ರವರೆಗೆ ಸಮಯಬೇಕೆಂದು ಕೇಳಿದ್ದಾರೆ. ಅದನ್ನು ಇಬ್ಬರು ಒಪ್ಪಿ ಬರೆಯಿಸಿದ್ದೇವೆ.

ದಿನಾಂಕಃ 30.06.2018 ರ ಒಳಗೆ ಕ್ರಯಪತ್ರ ಮಾಡಿಕೊಡುತ್ತೇನೆಂದು 1 ನೆ ಪ್ರತಿವಾದಿ ಬರೆದುಕೊಟ್ಟಿದ್ದರು. ಆ ಅವಧಿಯ ಒಳಗೆ ನಾನು ಯಾವುದೆ ಕ್ರಮ ತೆಗೆದುಕೊಂಡಿಲ್ಲ. ಲೀಗಲ್ ನೋಟೀಸ್ ನಲ್ಲಿ ಸ್ವತ್ತಿ ನ ಸ.ನಂಬರ್ , ವಿಸ್ತೀರ್ಣ ಮತ್ತು ಚೆಕ್ ಬಂದಿ ನಮೂದಿಸಿದ್ದೇವೆ. ದಾವಾ ಸ್ವತ್ತಿನ ವಿಚಾರವಾಗಿ ನಾನು ಯಾವುದೆ ಲೀಗಲ್ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಬಡ್ಡಿಗಾಗಿ ಹಣ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಅವರ ಮದ್ಯೆ ಸ್ವತ್ತಿನ ಮಾರಾಟವಾಗಿ ಯಾವುದೆ ಕರಾರುಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**